ಮನೆಗಳಿಗೆ ಹೋದ. ಹುಳ್ಳಗೆ ಮುಖ ಮಾಡಿಕೊಂಡೇ ಅವರು ಬಾಗಿಲು ತೆಗೆದ್ರು. ಒಂದಿಬ್ರು ಮನೇಲಿ ಗಂಡಸ್ರಿಲ್ಲ ಅಂತಂದ್ರು. ವಂದಿಸ ತಡ ಆಯ್ತು, ನಾಳೆ ಕಂಡಿತಾ ಕೊಡ್ತೀವಿ ಅಂತ ಕಣ್ಣೀರಿಟ್ರು. ತಾನು ಬಂದಿದ್ದು ವಸೂಲಿಗಲ್ಲ ಅಂತ ಸಮಾಧಾನ ಹೇಳಿ, ಒಂದೊಂದು ಮನೆಗೂ ನೂರು ನೂರು ರೂಪಾಯಿ ಕೊಟ್ಟ. ಲೆಕ್ಕ ಬರಕೊಂಡ. ಅವನು ಅತ್ಲಗೆ ಹೋಗ್ತಿದ್ದಂಗೇ ಶನಿ, ಸಾಡೇಸಾತಿ ಅಂತ ಅವನಿಗೆ ಶಾಪ ಹಾಕಿ, 'ನಮ್ಮ ಜೀವ ಹಿಂಡಿ, ಹೆಂಡ್ರನ್ನ ಮುಂಡೇರ ಮಾಡಿ ವಸೂಲಿ ಮಾಡಿದ ದುಡ್ನೇ ನಮಗೆ ಕೊಡ್ತಿದನೆ. ಅವನಿಗೇನು ರೊಕ್ಕ ಕಮ್ಮಿಯಾಗಿದ್ಯಾ, ಕೊಡಲಿ ಬಿಡಿ' ಅಂತಂದು ಅವನು ಕೊಟ್ಟ ನೂರು ರೂಪಾಯಿನ್ನ ಜೇಬಿಗಿಳಿಸಿದ್ರು.

ಅವನು ಮರುಜನ್ಮ ಪಡೆದ ದಿನದ ರಾತ್ರಿ ನೋಟ್ ಬುಕ್ ತೆಗೆದು ನೋಡಿದ. ಇಪ್ಪತ್ತೇಳು ಒಳ್ಳೇ ಕೆಲಸಗಳಾಗಿದ್ವು. ಕೆಟ್ಟ ಕೆಲಸ ಒಂದೂ ಇರಲಿಲ್ಲ. ಒಳ್ಳೇ ಕೆಲಸಕ್ಕೆ ಒಂದೂಕಾಲು ಸಾವಿರ ಕೈ ಬಿಟ್ಟಿತ್ತು. ಇವತ್ತು ಜಾಸ್ತಿ ಆಯ್ತು. ನಾಳೆಯಿಂದ ಸೊಲ್ಪ ಕಂಟ್ರೋಲ್ ಮಾಡ್ಕೋಬೇಕು, ದಿಸಕ್ಕೆ ಐನೂರು ಸಾಕು, ಇವತ್ತಿನ ಲೆಕ್ಕದಲ್ಲಿ ಹತ್ತು ಒಳ್ಳೇ ಕೆಲಸ ಅಂತೂ ಗ್ಯಾರಂಟಿ ಅಂತ ಲೆಕ್ಕ ಹಾಕ್ಕೊಂಡ. ಹಂಗೇ ಪ್ರತೀ ದಿವಸ ಹಂಚ್ತಾ ಹೋದ. ದಿನಕ್ಕೊಂದು ದೇವಸ್ಥಾನಕ್ಕೆ ಹೋದ. ಭಿಕ್ಷುಕರಿಗೆ ರೊಕ್ಕ ಹಂಚಿದ. ಬಾಕಿ ಕೊಡಬೇಕಾಗಿದ್ದ ಮನೆಗಳಿಗೆ ಹೋಗಿ ಒಂದೈವತ್ತೋ ಎಪ್ಪತ್ತೋ ಕೊಟ್ಟು ಬಂದ. ಹೊಟ್ಟೆ ಕೆಟ್ಟ ದಿನ ಯಾದಕ್ಕೂ ಇರಲಿ ಅಂತ ಒಂದಿಪ್ಪತ್ತು ಜಾಸ್ತೀನೇ ಕೈ ಬಿಚ್ಚಿದ. ಕೊಟ್ಟ ಕೊಟ್ಟಂಗೂ ಲೆಕ್ಕ ಬರ್ಕೋತಾ ಬಂದ.

ಜಂಬಣ್ಣನ ಒಳ್ಳೇ ಕೆಲಸದ ಸುದ್ದಿ ಊರು ಹರಡದು ತಡ ಆಗಲಿಲ್ಲ. ಬರೋ ಎಮ್ಮೆಲ್ಲೇ ಎಲೆಕ್ಷನ್‌ಗೆ ಜಂಬಣ್ಣ ನಿಲ್ತದನೆ ಅಂತ ಜನ ಗುಸುಗುಸು ಮಾತಾಡಿದ್ರು. 'ಯಿಲ್ಲಾಂದ್ರೆ ಯಾಕೆ ಹಂಗೆ ರೊಕ್ಕ ಕರ್ಚು ಮಾಡ್ತನೆ ಅವನು ಹೇಳಿ?'

ಒನ್ನೊನ್ಸತಿ ಯೋಚನೆ ಕಾಡ್ತಿತ್ತು ಜಂಬಣ್ಣನಿಗೆ, ಯಿದೆಲ್ಲಾ ಬೇಕಾ? ನೆಟ್ಟಗೆ ಎಲ್ರಂಗಿರಬೋದಲ್ವಾ? ಆದರೆ ಮರುಕ್ಷಣ ತಾನು ಭೂಮಿಗೆ ವಾಪಸ್ಸು ಬಂದಿದ್ದು, ಭಗವಂತ ಬುದ್ಧಿ ಹೇಳಿದ್ದು ನೆನಪಿಗೆ ಬಂದು ಅವತ್ತು ಒಂದೈನೂರು ರೂಪಾಯಿ ಹೆಚ್ಗೆ ದಾನ ಮಾಡಿಬಿಡ್ತಿದ್ದ. ಬರ್ತಾ ಬರ್ತಾ ತನ್ನ ದಾನವನ್ನ ತಿಂಗ್ಳಾ ತಿಂಗ್ಳಾ ಅದ್ಯಾವುದೋ ಸ್ಕೂಲಿಗೆ, ವಿಧವೆಯರ ಆಶ್ರಮಕ್ಕೆ, ಮುದುಕರ ಸಂಘಕ್ಕೂ ದಾನ ಮಾಡೋಕೆ ಶುರುಮಾಡ್ದ. ಏಳು ತಿಂಗಳಗೆ ಅವನ ಆಸ್ತಿಯ ಕಾಲು ಭಾಗ ಕರಗಿತ್ತು. ಒಂದೆಂಟು ತಿಂಗಳಗೆ ಊರೋರೆಲ್ಲಾ ಜಂಬಣ್ಣನಿಗೆ ದಾನಶೂರ ಕರ್ಣ ಅನ್ನೋ ಬಿರುದು ಕೊಟ್ರು, 'ಯಿದ್ರೆ ಜಂಬಣ್ಣನಂಗಿರಬೇಕಪಾ ಅಂದ್ರು, ಯಿಂಥನು ನೂರು ವರ್ಷ ಬದುಕಿರಬೇಕಪಾ ಅಂದ್ರು.' ತನ್ನ ಕೆಲಸ ತಾನು ಮಾಡ್ತಾ, ಆ ಭಗವಂತನಿಂದ ಯಾವತ್ತು ಬುಲಾವ್ ಬರತ್ತೋ ಅಂತ ಕಾಯ್ತಾಯಿದ್ದ. ಹಂಗಂತ ಹೇಳಿ ತಾನು ತನ್ನ ಕಸುಬಿನ ಕರ್ತವ್ಯವನ್ನ ಮರೀಲಿಲ್ಲ. ಆದ್ರೆ ಮದ್ಲಿನಂಗೆ ಬಲವಂತ ಮಾಡಿ ಕಸ್ಗತಿರಲಿಲ್ಲ. ನಯವಾಗಿ, ನಾಜೂಕಾಗಿ ತನ್ನ ಬಾಕಿ ವಸೂಲಿ ಮಾಡ್ತಿದ್ದ, ತನಗೆ ಬರಬೇಕಾದ್ದನ್ನ ಜಪ್ತಿ ಮಾಡ್ತಿದ್ದ. ಊರಗೆ ಜಂಬಣ್ಣ ಒಂದು ದೊಡ್ಡ ಹೆಸರಾದ. ಚೌಕೀಪೇಟೆ ಸರ್ಕಲ್ಲಿಗೆ ಇವನ ಹೆಸರಿಟ್ರು. ಸರ್ಕಾರೀ ಸ್ಕೂಲಿನ ಚರಿತ್ರೆ ಭಾಗದ ಬಿಲ್ಡಿಂಗಿಗೆ ಇವನ ಹೆಸರಿಟ್ರು.

ಇದೆಲ್ಲಾ ಸರಿ, ಜಂಬಣ್ಣನ ಹೆಣ್ತಿಗೆ ಮಾತ್ರ ಇದು ಸರಿ ಕಾಣ್ಲಿಲ್ಲ. 'ನಂಗೊತ್ತು, ಹಿಂಗೆ ದಾನ ಧರ್ಮ ಮಾಡಿ ಸೊರ್ಗದ ಸೀಟು ಖರೀದಿ ಮಾಡ್ತಾದೀರಿ. ನಂಗೊತ್ತು. ನಿಮಗೆ ನಿಮ್ಮುದು ಬಿಟ್ಟು ಬೇರೆಯೋರು ಹೋಗಲಿ, ನಾನೂ ಕಾಣಲ್ಲ. ನೀವೊಬ್ರೇ ಸೊರ್ಗಕ್ಕೆ ಹೋಗಬೇಕೂಂತ ಇದೀರಾ, ಹೋಗಿ' ಅಂತ ದಿಸಾ ಮುಳ್ಳು ಮುರೀತಾಯಿದ್ಲು. 'ಅಲ್ಲ ಕಣೇ, ದಾನದಾಗಿರಾ ಸಂತೋಷ ಆನಂದ ಯಂಥದ್ದು ಗೊತ್ತೈತಾ? ಅದುಕ್ಕೇ ದಾನ ಮಾಡ್ತದೀನಿ' ಅಂತ ಜಂಬಣ್ಣ ಅರೆ ಮನಸ್ಸಿನಿಂದ ಸಮಜಾಯಿಷಿ ಕೊಟ್ರೂ, ಚುರ್ರಂದಿತ್ತು ಅವನಿಗೆ. 'ಹೋಗಲಿ ನೀನೂ ವಂದಿಷ್ಟು ದಾನ ಅಂತ ಮಾಡು, ದಿನಕ್ಕಿಷ್ಟು ಅಂತ ನಿಂಗೆ ಕೊಡ್ತೀನಿ' ಅಂದ. ಅವಳು ಯಾವಾಗ 'ನಂಗೇನೂ ಬೇಡ ನಿಮ್ಮ ದಾನ, ನನ್ನ ಹಣೇನಾಗೆ ಯೇನು ಬರದಿದ್ಯೋ ಹಂಗಾಗತ್ತೆ' ಅಂದ್ಲೋ ಜಂಬಣ್ಣ ವಂದಿಷ್ಟು ಉಳೀತು ಅಂತ ನಿರುಮ್ಮಳನಾಗಿ ಉಸಿರುಬಿಟ್ಟ.

ಒಂದು ವರ್ಷ ಕಳೆಯದ್ರಗೆ ಎಂಟು ನೋಟ್ ಬುಕ್ ತುಂಬಿತ್ತು. ಒಂದೇ ಒಂದು ಕೆಟ್ಟ ಕೆಲಸದ ಎಂಟ್ರಿ ಇರಲಿಲ್ಲ. ರಾತ್ರಿ ಮಲಗಾ ಮುಂಚೆ ಒನ್ನೊಂದಿಸ ಆ ನೋಟ್‌ಬುಕ್ಕುನ್ನ ಕೈಲಿ ಹಿಡಿದು, ಅದನ್ನ